165

ಪಂಚಕನ್ಯೆಯರು

ಮತ್ತು

ಚಿರಂಜೀವಿಗಳು

★

ಲೇಖಕರು.

ಶ್ರೀ| ಸಿ. ಗೋಪಾಲಕೃಷ್ಣಾಚಾರ್ಯ,

ಚಿತ್ರಾಪುರ,

1957.

ಒಂದಾಣೆ ಮಾಲೆ

ಒಂದಾಣೆ ಮಾಲೆ

ಪ್ರತಿ ಶನಿವಾರ, (ವಾರಕ್ಕೊಮ್ಮೆ) ಒಂದು ಹೊಸ ಪುಸ್ತಕ ಪ್ರಕಟವಾಗುತ್ತಿದೆ.

ಪ್ರತಿ ಪುಸ್ತಕದಲ್ಲಿ 16 ಪುಟಗಳಿಗಿಂತ ಕಡಿಮೆಯಿಲ್ಲ.

ಪ್ರತಿಯೊಂದಕ್ಕೆ ಕ್ರಯ — ಒಂದಾಣೆ.

ಕ್ಷೇತ್ರ ವಿವರ, ಕಥೆಗಳು, ನಾಟಕಗಳು, ಕೀರ್ತನೆಗಳು —ಇತ್ಯಾದಿ ಪ್ರಕಟವಾಗುತ್ತಿವೆ.

1954ನೇ ಸಪ್ಟಂಬರದಿಂದ 1957ನೇ ದಶಂಬರದ ವರೆಗೆ, 165 ಪುಸ್ತಕಗಳು ಪ್ರಕಟವಾಗಿವೆ.
ಇನ್ನೂ, ಪ್ರತಿ ವಾರ ಆಗುತ್ತಲೇ ಇವೆ.

15 ನಯೆ ಪೈಸೆ ಸ್ಟಾಂಪ್ ಕಳಿಸಿ, ಪುಸ್ತಕದ ಪಟ್ಟಿ ತರಿಸಿಕೊಳ್ಳಿರಿ.

ಮುನ್ನುಡಿ

ರಾಮಾಯಣ ಮತ್ತು ಭಾರತ ಇವು ಮಾನವನ ಶಾಶ್ವತ ಚರಿತ್ರಗಳಾಗಿವೆ. ಅವೆರಡು ಮಹಾ ಕೃತಿಗಳಲ್ಲಿ ಸ್ಥೂಲವಾಗಿ, ಎಲ್ಲ ವರ್ಗಗಳ ಮಾನವರ ಮನೋಧರ್ಮಾದಿಗಳು ವಿವರಿಸಲ್ಪಟ್ಟಿವೆ ಪ್ರತಿಯೊಂದು ಪಾತ್ರವೂ ಒಂದೊಂದು ವಿಶಿಷ್ಟ ವರ್ಗವನ್ನು ಪ್ರತಿನಿಧೀಕರಿಸುತ್ತದೆ.

ಪಂಚಕನ್ಯೆಯರು: ನಿತ್ಯಸ್ಮರಣೀಯರಾಗಿರುವ ಪಂಚಕನ್ಯೆಯರು ಯಾರೆಂದು ವರ್ಣಿಸಲ್ಪಟ್ಟಿದೆಯೋ— ಅವರು ಮಾತ್ರ ಸರ್ವೋಚ್ಚ ಗುಣದವರೆಂದು ಅರ್ಥವಲ್ಲ. ಆದರ್ಶ ಸತಿಯರಲ್ಲಿರಬೇಕಾದ ಎಲ್ಲ ಗುಣಗಳು ಯಾವಳಾದರೂ ಒಬ್ಬಳೇ ಕನ್ಯೆಯಲ್ಲಿ ದೊರೆಯಲಾರವೆಂದು, ಶ್ರೇಷ್ಠ ಕವಿಯು ಆ ಐವರು ಕನ್ಯೆಯರಲ್ಲಿ ಅವೆಲ್ಲ ಗುಣಗಳನ್ನು ಕಂಡು ಪ್ರತ್ಯೇಕಿಸಿರುವನು. ಅತಿ ಆಳವಾಗಿ ವಿಮರ್ಶಿಸುವ ಸಹೃದಯಿಯು ಈ ಪಂಚಕನ್ಯೆಯರ ಚರಿತ್ರವನ್ನು ಮಥಿಸಿದರೆ ಈ ಸತ್ಯತೆಯನ್ನು ಕಾಣುವನು.

ಸಪ್ತ ಚಿರಂಜೀವಿಗಳು: ಶ್ರೇಷ್ಠ ಚಿರಂಜೀವಿಗಳು ಏಳು ಮಂದಿ ಎಂದು ವರ್ಣಿತವಾಗಿರುವುದರ ಮಥಿತಾರ್ಥವೂ ಅದೇ ಆಗಿರುತ್ತದೆ. ಒಬ್ಬೊಬ್ಬನೂ ಒಂದೊಂದು ವೈಶಿಷ್ಟ್ಯವನ್ನುಳ್ಳವನು. ಆ ಏಳೂ ಮಂದಿಯಲ್ಲಿ ಸಮಷ್ಟಿಯಾಗಿ 'ಚಿರಂಜೀವಿ'ಯ ಎಲ್ಲ ಲಕ್ಷಣಗಳು ಪ್ರತಿಬಿಂಬಿತವಾಗಿವೆ.

ಈ ಲೇಖನವನ್ನು ಬರೆದ ಶ್ರೀ। ಸಿ. ಗೋಪಾಲ ಕೃಷ್ಣಾಚಾರ್ಯರು, ಈ ಚಿಕ್ಕ ವಹಿಯಲ್ಲಿ, ಪಂಚಕನ್ಯೆಯರ ಮತ್ತು ಸಪ್ತ ಚಿರಂಜೀವಿಗಳ ಸಂಕ್ಷಿಪ್ತ ಕಥೆಯನ್ನಷ್ಟೆ ಕೊಡಲು ಸಾಧ್ಯವಾಗಿದೆ. ಆಳವಾದ ಅಧ್ಯಯನಕ್ಕೆ, ಶ್ರೀ ರಾಮಾಯಣ— ಮಹಾಭಾರತಗಳನ್ನು ವಾಚಕರು ಪೂರ್ಣ ಓದಿ ಅದರ ತಿರುಳನ್ನು ಅರಿತುಕೊಳ್ಳುವರೆ— ಪ್ರೇರಕವಾಗಿಯೇ ಈ ಚಿಕ್ಕ ಕೃತಿಯು ವಾಚಕರ ಮುಂದೆ ಇರಿಸಲ್ಪಟ್ಟಿದೆ.

ಕುಡ್ಪಿ ವಾಸುದೇವ ಶೆಣೈ.

ಪಂಚಕನ್ಯೆಯರು

ಮತ್ತು

ಚಿರಂಜೀವಿಗಳು

ಶ್ಲೋಕ || ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ|
ಪಂಚಕನ್ಯಾಃ ಸ್ಮರೇನ್ನಿತ್ಯಂ ಮಹಾಪಾತಕ ನಾಶನಮ್||

ಅಹಲ್ಯಾ, ದ್ರೌಪದೀ, ಸೀತಾ, ತಾರಾ, ಮಂಡೋದರಿ ಎಂಬ ಈ ಪಂಚಕನ್ಯೆಯರನ್ನು ಯಾರು ದಿನನಿತ್ಯ ಸ್ಮರಿಸುವರೋ ಅವರು ಪಂಚ ಮಹಾಪಾತಕಾದಿ ಬಾಧೆಗಳಿಂದ ಮುಕ್ತರಾಗುವರೆಂದು ತಾತ್ಪರ್ಯ.

"ಅನುಕೂಲಾಂ, ವಿಮಲಾಂಗೀಂ, ಕುಶಲಾಂ, ಕುಲಜಾಂ, ಸುಶೀಲಾಂ ಚ||" ಈ ಪಂಚ ಲಕ್ಷಣಯುಕ್ತರಾಗಿಯೂ, ಸ್ತ್ರೀಜಾತಿಗೆ ರೂಪಾತಿಶಯಗಳಲ್ಲಿ ಎಷ್ಟು ವಿಧವಾದ ಸ್ವಜಾತಿಗಳಿವೆಯೋ ಅವೆಲ್ಲವೂ ಪಂಚಕನ್ಯೆಯರಲ್ಲಿ ಸಮಷ್ಟಿಯಾಗಿವೆ. ಸಂಲಕ್ಷಣಯುಕ್ತರಾಗಿ ಅನೇಕ ಸ್ತ್ರೀಯರು ಇಲ್ಲವೆ? ಅವರೇಕೆ ನಿತ್ಯ ಸ್ಮರಣೀಯರಾಗಬಾರದು? ಎನ್ನುವುದಾದರೆ "ಒಂದು ಹೂದೋಟದಲ್ಲಿ ಅನೇಕ ವಿಧವಾದ ಹೂಗೊಂಚಲುಗಳಿವೆ. ಅವುಗಳಲ್ಲಿ ಸುಮಧುರಯುಕ್ತವಾಗಿಯೂ, ನೇತ್ರಾನಂದ ವಸ್ತುವಾಗಿಯೂ, ಮಾಧುರ್ಯ ತುಂಬಿದ ನಾಲ್ಕೈದು ಹೂಗೊಂಚಲನ್ನು ಮಾತ್ರ ದುಂಬಿಯು ಮಧುವನೀಂಟಲು ಆಯ್ದುಕೊಳ್ಳುವಂತೆಯೋ" ಇವರಲ್ಲಿರುವ ವೈಶಿಷ್ಟ್ಯ.

"ಕಾರ್ಯೇಷು ಮಂತ್ರೀ ಕರಣೇಷು ದಾಸೀ ರೂಪೇಷು ಲಕ್ಷ್ಮೀ ಕ್ಷಮಯಾ ಧರಿತ್ರೀ || ಸ್ನೇಹೇಷು ಮಾತಾ ಶಯನೇಷು ವೇಶ್ಯಾ, ಷಡ್ ಜೀವ ನಾರೀ ಕುಲಧರ್ಮ ಪತ್ನೀ" ಎಂದು ಸುಭಾಷಿತಕಾರರ ಮಾತಿನಂತೆಯೂ,—

ಕನ್ಯೆಯಾಗಿ, ಪತ್ನಿಯಾಗಿ, ಮಾತೆಯಾಗಿ, ಆಯಾ ಕಾಲದ ಕರ್ತವ್ಯಗಳನ್ನು ಧರ್ಮಕ್ಕೆ ಚ್ಯುತಿಬಾರದಂತೆ ಪಾಲಿಸಿ, ಅನೇಕ ಸಂಕಷ್ಟಗಳು

ಎದುರುಬಂದರೂ, ಆ ಕಪಟ ಮೋಹಜಾಲಗಳಿಗೆ ಬಲಿಬೀಳದೆ, ಸ್ಥೈರ್ಯ, ಧೈರ್ಯಗಳಿಂದ ಮುಂದುವರಿದವರು ಈ ಕನ್ಯೆಯರು.

ಗೌತಮನ ಪತ್ನಿಯಾದ ಅಹಲ್ಯೆಯು ನಿತ್ಯಶುದ್ಧಳು. ಬ್ರಹ್ಮಚಾರಿಣಿ ಇವಳು ಬ್ರಹ್ಮನ ಮಾನಸಿಜಳು. ದ್ರುಪದಕುಮಾರಿಯಾದ ದ್ರೌಪದಿಯು ಯಜ್ಞದಲ್ಲಿ ಜನಿಸಿದಳು; ಪಾಂಡವರೈವರ ಅರಸಿಯಾಗಿ ಮಹಾಭಾರತಾಹವದಲ್ಲಿ ಆದ್ಯಂತವಾಗಿಯೂ ಹರಡಿರುವಳು. ಇಳಾನಂದನೆಯಾದ ಜಾನಕಿಯು ಜನಕರಾಯನ ಸಾಕುಮಗಳು; ಆದರ್ಶಮಾತೆ. ಅಮೃತಮಥನಕಾಲದಲ್ಲಿ ಜನಿಸಿದ ತಾರೆಯು ವಾಲಿಯೆಂಬವನ ಪತ್ನಿಯಾಗಿ ಪತಿಯೊಡನೆ ಏಕ ಹೃದಯದಿಂದ ಬಾಳಿದಳು. ಇವಳ ಜೀವನವು ರಾಮಾಯಣದಲ್ಲಿ ಅತಿ ಚಿಕ್ಕದಾಗಿ ಉಲ್ಲೇಖಿಸಲ್ಪಟ್ಟಿದೆ. ಮಯಾಸುರನ ಮಗಳಾದ ಮಂಡೋದರಿಯು ಲೋಕಕಂಟಕ ರಾವಣನ ವೀರಪತ್ನಿಯಾಗಿದ್ದಳು. ಮಹಾಪತಿವ್ರತೆಯಾಗಿದ್ದಳು.

ಈ ಪಂಚಕನ್ಯೆಯರ ಕಥೆಯನ್ನು ಸಂಕ್ಷಿಪ್ತವಾಗಿ ಯಥಾಮತಿ ವಿವರಿಸುವೆನು.

ಅಹಲ್ಯಾ

ಮಿಥಿಲಾಪಟ್ಟಣದಿಂದ ಅನತಿ ದೂರದಲ್ಲಿ ತಪೋವನವು ಕಂಗೊಳಿಸುತ್ತಿತ್ತು. ಅಲ್ಲಿ ನಾನಾ ವಿಧ ಮೃಗಜಾತಿಯವುಗಳೂ, ಅನೇಕ ಪಕ್ಷಿಜಂತುಗಳೂ ಜಾತಿಭೇದವನ್ನು ತೊರೆದು ಜೀವಿಸುತ್ತಿದ್ದುವು ಆ ತಪೋವನದಲ್ಲಿದ್ದುದು ವೃಕ್ಷಗಳ ಮಧ್ಯದಲ್ಲಿ ಪರ್ಣಕುಟೀರ ಮಾತ್ರ. ತಪಸ್ಸಿಗೆ ಪ್ರಶಾಂತ ವಾತಾವರಣ. ಅಲ್ಲೇ ಗೌತಮ ಮಹರ್ಷಿಯು ತಪಸ್ಸಿನಿಂದ ಕಾಲಕಳೆಯುತ್ತಿದ್ದನು.

ಸೃಷ್ಟಿಕರ್ತ ಬ್ರಹ್ಮನು ಮನೋಇಚ್ಛೆಯಂತೆ ರೂಪವತಿ ಕನ್ಯೆಯನ್ನು ಸೃಷ್ಟಿಸಿ ಅಹಲ್ಯೆಯೆಂದು ಅಂಕಿತವನ್ನಿರಿಸಿ ಆ ಕನ್ಯೆಯನ್ನು ಗೌತಮನಿಗೆ ಧಾರೆಯೆರೆದನು. ಸರ್ವಲಕ್ಷಣಯುಕ್ತೆಯಾಗಿ ಪತಿಸೇವೆ, ಪತಿಯಲ್ಲಿ ದೃಢ ನಂಬಿಕೆ, ಮನೋಧರ್ಮಗಳಿಂದ ಕೂಡಿದವಳಾಗಿದ್ದಳು. ನಡೆನುಡಿಗಳಲ್ಲಿ ಗೌತಮನ ಆ ಯಾವ ತಪಸ್ಸಿನ ಕ್ರಮಕ್ಕೆ ಅನುಗೃಹಿಣಿಯಾಗಿದ್ದಳು. ಕೆಲವು ವರ್ಷ ಕಳೆಯುತ್ತಲು, ಅಹಲ್ಯೆಯು ಗರ್ಭವತಿಯಾಗಿ ಗೌತಮನ

ಪ್ರತಿಬಿಂಬವಾಗಿಯೂ ಕುಲೋದ್ಧಾರಕನಾಗಿಯೂ ಇರುವ ಶತಾನಂದನೆಂಬ ಪುತ್ರರತ್ನವನ್ನು ಪಡೆದಳು.

ಬಳಿಕ ಐಹಿಕ ಸುಖವನ್ನು ತೊರೆದು, ಗೌತಮನೊಡನೆ, ಅಂತೆಯೇ ಪರಗತಿಯ ಸಾಧನೆಯನ್ನು ಇಚ್ಛಿಸಿದವಳಾಗಿ ಅನುವರ್ತಿನಿಯಾಗಿದ್ದಳು. ಹೀಗೆಯೇ ಅನೇಕ ವರ್ಷಗಳುರುಳಿದುವು.

ಅಹಲ್ಯೆಯ ರೂಪಕ್ಕೆ ಕಾಮಿತನಾಗಿ ದೇವೇಂದ್ರನು ತನ್ನರಸಿಯನ್ನು ತೊರೆದು ಇವಳ ಸ್ಮರಣೆಯಲ್ಲೇ ಕಾಲಕಳೆಯುತ್ತಿದ್ದನು. ಸಮಯ ಸಾಧಿಸುತ್ತಿದ್ದನು. ಅಗತ್ಯವೋ, ಅನಗತ್ಯವೋ ಎಂಬ ವಿಚಾರವನ್ನೂ ತಿಳಿಯದೆ ಹಾಳುಮನಸ್ಸನ್ನು ನಿರ್ಧರಿಸಿಕೊಂಡನು. ಕಪಟ ಮಾಯಾ ವಿದ್ಯೆಯನ್ನರಿತ ದೇವೇಂದ್ರನು ಕಾಮದಿಂದ ಕುರುಡನಾಗಿ ಒಂದು ದಿನ ಅರ್ಧ ರಾತ್ರಿ ಕಳೆಯುತ್ತಲು ಕೋಳಿಯಂತೆ ಕೂಗಿದನು. ಕೋಳಿಯ ಕೂಗನ್ನು ಕೇಳಿದ ಗೌತಮನು ಸ್ನಾನಕ್ಕೆಂದು ಪರ್ಣ ಕುಟೀರದಿಂದ ಹೊರಬಿದ್ದನು. ಅಹಲ್ಯೆಯು ಕುಟೀರವನ್ನು ಶುಚಿಮಾಡುತ್ತಿದ್ದಳು. ಸುರಪತಿಯು ಗೌತಮ ವೇಷಧರಿಸಿ ಎಲೆಮನೆಯನ್ನು ಹೊಕ್ಕು ದರ್ಭೆ ಯಿಂದ ತಯಾರಿಸಿದ ಶಯ್ಯೆಯಲ್ಲಿ ಕುಳಿತನು. ಪತಿಯ ಚರ್ಯೆಯನ್ನು ಕಂಡ ಸತಿಯು ಸಮೀಪಿಸಿ, "ಇದೇನು ಸ್ವಾಮಿ, ಶಯ್ಯೆಯಲ್ಲಿ ಕುಳಿತಿರು ವಿರಿ?" ಎಂದು ಪ್ರಶ್ನಿಸಿ, "ಈ ಕಾಲನಲ್ಲಿ ರಮಿಸುವುದು ಯಥೋಚಿತವಲ್ಲ. ನೀತಿ ವಿರುದ್ಧವಿದು, ತಪೋಭಂಗವಾಗುವುದು" ಎಂದೆಷ್ಟು ಹೇಳಿದರೂ ಕೇಳದ ಶಚೀಪತಿಯು ಬಲಾತ್ಕಾರಕ್ಕೆ ಮನಮಾಡಿದನು.

ಇತ್ತ ಗೌತಮನು ಸ್ನಾನಾದಿಗಳನ್ನು ತೀರಿಸಿ ಪರ್ಣಮಂದಿರವನ್ನು ಹೊಕ್ಕಾಗ ಅಕೃತ್ಯ ಕೃತ್ಯವನ್ನು ಕಂಡು ರೋಷಪೂರಿತನಾಗಿ ಮಾಯಾ ಜಾಲದಿಂದ ಮೋಸಮಾಡುವ ಶಚೀಪತಿಗೆ "ಸಹಸ್ರಯೋನಿ"ಯುಳ್ಳವನಾ ಗೆಂದು ಶಪಿಸಿದನು. ಸತಿಯಾದ ಅಹಲ್ಯೆಗೆ "ನೀನು ರೂಪವಿಲ್ಲದವಳಾಗಿ ಈ ವನದಲ್ಲಿ ಬಿದ್ದಿರು. ಮುಂದೆ ರಾಮನು ಈ ಆಶ್ರಮದಲ್ಲಿ ಪಾದಸಂಸ್ಪರ್ಶಿ ಸಿದಾಗ ನೀನು ನಿಜವೇಷವನ್ನು ಹೊಂದುವಿ" ಎಂದು ಶಪಿಸಿ ಅಲ್ಲಿಂದ ಹೊರಟು ಪರ್ವತಶಿಖರದಲ್ಲಿ ತಪಸ್ಸಿನಿಂದ ಕಾಲವ್ಯಯಮಾಡುತ್ತಿದ್ದನು.

ತ್ರೇತಾಯುಗವು ಕಾಲಿಟ್ಟಾಗ ದಶರಥನೆಂಬ ಕ್ಷೋಣಿಪತಿಯು ಪುತ್ರ ಕಾಮೇಷ್ಟಿ ಯಾಗವನ್ನು ಮಾಡಿ ನಾಲ್ವರು ಪುತ್ರರನ್ನು ಪಡೆದನು. ಅವ

ರಲ್ಲಿ ರಾಮಲಕ್ಷ್ಮಣರನ್ನು ವಿದ್ಯಾಭ್ಯಾಸಕ್ಕಾಗಿ ವಿಶ್ವಾಮಿತ್ರರೊಡನೆ ಕಳುಹಿಸಿದನು. ಅನೇಕ ಶಾಸ್ತ್ರಗಳನ್ನಭ್ಯಸಿಸುತ್ತಿರಲು, ಸೀತಾಸ್ವಯಂವರದ ವರ್ತಮಾನವನ್ನುಕೇಳಿ ಮಿಥಿಲಾ ಪಟ್ಟಣಕ್ಕೆ ಹೊರಟನು. ಮಧ್ಯಮಾರ್ಗದಲ್ಲಿ ಕಂಗೊಳಿಸುವ ತಪೋವನದಲ್ಲಿ ಶ್ರೀರಾಮನು ಕಾಲಿರಿಸಿದಾಗ ಶಿಲೆಯಂತಾಗಿದ್ದ ಅಹಲ್ಯೆಯು ನಿಜರೂಪವನ್ನು ಹೊಂದಿ, ಅವತಾರಪುರುಷ ರಾಮನಿಗೆ ವಂದಿಸಿ ಅವಳ ಅಭಿಮತದಂತೆ ಗೌತಮನನ್ನು ಸೇರಿ ಸುಖವಾಗಿದ್ದಳು. ಸ್ವರ್ಗಾಧಿಪತಿಯ ಇಚ್ಛೆಗೆ ಅನುವರ್ತಿನಿಯಾಗಲು ಮನಸ್ಸಿಲ್ಲವಾದರೂ ಕಾಮಿತನವನ ಬಲಾತ್ಕಾರಕ್ಕೆ ಅರಿಯದೆ ತನು ತೆತ್ತಳು. ಅಹಲ್ಯೆಯು ಐಹಿಕಸುಖಕ್ಕೆ ತಿಲಾಂಜಲಿಯಿತ್ತವಳಾದ ಮೇಲೆ ಏನೋ ಕರ್ಮವಿಪಾಕದ್ದೆಸೆಯಿಂದ ಅಂತಹ ಕೃತ್ಯ ನಡೆದುದಾದರೂ ಇನ್ನಾವ ಗುಣಗಳಲ್ಲೂ ಅತಿಕ್ರಮಿಸಿ ಮೀರಿದ ಹೆಣ್ಣು ಇವಳಲ್ಲ.

ದ್ರೌಪದಿ

ದ್ರೌಪದಿಯ ಪೂರ್ವಜನ್ಮದ ಕಥೆಯು ಕುಮಾರವ್ಯಾಸನ ಭಾರತದಲ್ಲಿ ಹೀಗಿದೆ: ವಿದರ್ಭದೇಶದ ಚಕ್ರವರ್ತಿಯಾಗಿದ್ದ ನಳಮಹಾರಾಯನ ಮಗಳು ನಳಾಯಿನಿಯೆಂಬವಳನ್ನು ವಿಪ್ರನೋರ್ವನಿಗೆ ಕೊಟ್ಟು ವಿವಾಹವಾಯಿತು. ನಳಾಯಿನಿಯ ಪತಿಯು ಕುಷ್ಠರೋಗದವನೆಂದು ತಿಳಿಯಿತು. ಅವಳು ಹೇಸದೆ ಪತಿಸೇವೆಯಲ್ಲಿ ನಿರತಳಾಗಿದ್ದಳು. ಒಂದು ದಿನ ಪತಿಯು ಕೊಳೆತ ಬೆರಳುಬಿದ್ದ ಭುಕ್ತ ಉಚ್ಚಿಷ್ಟ ಅನ್ನವನ್ನು ನಳಾಯಿನಿಯು ಸೇವಿಸಿದಾಗ, ತಪೋಸಿಧಿ ವಿಪ್ರನು ಕಂಡು, ಸತಿಯ ಪತಿಧರ್ಮಕ್ಕೆ ಮೆಚ್ಚಿ ಇಚ್ಛಿತ ವರವನ್ನು ಬೇಡೆಂದನು. "ಪತಿಯ ಸುಂದರರೂಪವನ್ನು ಒಮ್ಮೆ ಕಾಣಬೇಕೆಂ"ದು ಮನೋಧರ್ಮಪ್ರಕಾರ ಇಚ್ಛಿಸಿದಾಗ ಕುಷ್ಠರೋಗಿಯಾದ ತಪಸ್ವಿಯು ಅಂತೆಯೇ ಕಾಣಿಸಿಕೊಂಡನು. ಬಳಿಕ ಅದೃಶ್ಯನಾಗುತ್ತಿರಲು, ನಳಾಯಿನಿಯು ಹೋಗದಿರೆಂದು ತಡೆದಾಗ, ಭೂಲೋಕದಲ್ಲಿ ನೃಪನ ಕುಮರಿಯಾಗೆಂದು ಹೇಳಿ ಆ ತಪಸ್ವಿಯು ನಟ್ಟಡವಿಗೆ ಮರಳಿ ತಪಸ್ಸಿನಿಂದ ಇಹಲೋಕ ತ್ಯಜಿಸಿದನು.

ನಳಾಯಿನಿಯು ಭಕ್ತಿಭಾವದಲ್ಲಿ ಶಂಕರನನ್ನು ಪೂಜಿಸಿ ಮೆಚ್ಚಿಸಿ ಪ್ರತ್ಯಕ್ಷೀಕರಿಸಿ "ಪತಿಂದೇಹಿ, ಪತಿಂದೇಹಿ," ಎಂದು ಐದು ಬಾರಿ ಬೇಡಿ

ದಳು. ಆಗ ಕೈಲಾಸಪತಿಯು "ತಳೋದರೀ, ದ್ರುಪದರಾಯನ ಮಗಳಾಗಿ ಬಾಳು; ಐವರು ನಿನ್ನರಸರಾಗುವರೆ"ಂದು ವರವಿತ್ತನು. ಸತಿಯು ಬೆಚ್ಚಿ ತನ್ನ ಕಿವಿಗಳನ್ನು ಮುಚ್ಚಿದಳು. ಆಗ ಶಿವನು: "ಸತೀ, ಅಂಜದಿರು. ಧರ್ಮ ಶಾಸ್ತ್ರಕ್ಕೆ ಚ್ಯುತಿ ಬಾರದು. ವೇದಬಾಹಿರರಾದ ಪತಿಗಳೆಂದು ತಿಳಿಯದಿರು" ಎಂದು ಹೇಳಿ, ಅದೃಶ್ಯನಾದನು. "ನಿನ್ನ ಕಥನವೇ ಪುಣ್ಯ ಕಥನವು । ನಿನ್ನ ಚರಿತವೇ ಪುಣ್ಯಚರಿತವು । ನಿನ್ನ ನೆನೆದಂಗನೆಗೆ ಬಹುದು ಪತಿವ್ರತಾಭಾವ ॥ ಎನ್ನನುಜ್ಞೆಗೆ ಧರ್ಮಚಿಂತಾ । ಪನ್ನೆಯಾಗದಿರೆಂದು ಕೃಪೆಯಲಿ । ತನ್ನ ಸಿರಿ ಕರತಳವನಿರಿಸಿದನುತ್ತಮಾಂಗದಲಿ ॥

(ಆದಿ ಪರ್ವ ೧೬ ಅ.)

ಬಳಿಕ ನಳಾಯನಿಯು ಯೋಗಾಭ್ಯಾಸದಿಂದ ತನುವನ್ನು ದಹಿಸಿಕೊಂಡಳು. ಇತ್ತ ದ್ರುಪದರಾಯನು ದ್ರೋಣಾಚಾರ್ಯರಿಂದ ಅವಮಾನಿತನಾಗಿ, ಆ ದ್ರೋಣಾಚಾರ್ಯರನ್ನು ಕೊಲ್ಲುವ ಮಗನೂ, ಅರ್ಜುನನಿಗೆ ಕೊಡುವ ಮಗಳೂ ಜನಿಸಬೇಕೆಂದು ಯಜ್ಞಮಾಡಿದಾಗ, ಆ ಯಜ್ಞದಲ್ಲಿ ಜನಿಸಿದವರೇ ದೃಷ್ಟದ್ಯುಮ್ನ—ದ್ರೌಪದಿಯರು.

ಹಸ್ತಿನಾವತಿಯಲ್ಲಿ ಪಾಂಡು-ಧೃತರಾಷ್ಟ್ರರೆಂಬವರಲ್ಲಿ ಮೊದಲನೆಯವನಿಗೆ ಐದು ಜನ ಪುತ್ರರೂ, ಧೃತರಾಷ್ಟ್ರನಿಗೆ ನೂರು ಮಂದಿಯೂ ಜನಿಸಿದರು. ಪಾಂಡವರಿಗೂ ಧಾರ್ತರಾಷ್ಟ್ರರಿಗೂ ದಾಯಾದ್ಯಮತ್ಸರವುಂಟಾಗಿ ಪಾಂಡವರಿಗೆ ವನವಾಸವಾಯಿತು.

ಆಗಲೇ ದ್ರೌಪದಿಯ ಸ್ವಯಂವರವೆಂದು ವರ್ತಮಾನವನ್ನು ಕೇಳಿ ಪಾಂಡವರೂ ಅಲ್ಲಿಗೆ ಹೋದರು. ಪಣವಾಗಿಟ್ಟ ಮತ್ಸ್ಯಯಂತ್ರದಿಂದ ಅನೇಕ ಮಕುಟಧಾರಿಗಳು ಸೋತಾಗ, ವಿಪ್ರವೇಷದಲ್ಲಿದ್ದ ಪಾರ್ಥನು ಪಣಪ್ರಕಾರ ಗೆದ್ದು ದ್ರೌಪದಿಯನ್ನು ವರಿಸಿದನು.

ರಾಜಕುವರಿಯು ಬ್ರಾಹ್ಮಣಪತ್ನಿಯಾಗುವುದು ಅವಹೇಳನವೆಂದು ದ್ರುಪದರಾಜನು ಚಿಂತೆಯಲ್ಲಿರಲು, ದ್ರುಪದಜೆ ಸಂತೋಷದಿಂದ ವರಿಸಿದಳು. ಬಳಿಕ ಐವರೂ ತಮ್ಮ ಪರ್ಣಕುಟೀರವನ್ನು ಹೊಕ್ಕಾಗ ಅಡುಗೆಮನೆಯಲ್ಲಿದ್ದ ತಾಯಿ ಕುಂತಿಯನ್ನು ಕರೆದು ಅರ್ಜುನನು, "ಅಮ್ಮಾ! ಇದೊಂದು ಅಮೂಲ್ಯ ವಸ್ತುವನ್ನು ತಂದಿರುವೆವು" ಎಂದನು.

ಆಗ ಕುಂತಿಯು, "ನೀವೈವರೂ ಭೋಗಿಸಿಕೊಳ್ಳಿ" ಎಂದಳು. ಸಹೋದರರು ತಾಯಿಯ ಮಾತಿಗಾಗಿ ದ್ರೌಪದಿಯ ಮೊಗವನ್ನು ನೋಡಿದರು. "ಹಿರಿಯರ ಮಾತು ಮೀರುವುದು ಯಥೋಚಿತವಲ್ಲ" ಎಂಬ ಭಾವಾರ್ಥಕ ದೃಷ್ಟಿಯಿಂದ ಇದ್ದಳು. ಬಳಿಕೆಲ್ಲರೂ ಹಿರಿಯರ ಮಾತಿಗಾಗಿ ಅನುಮತಿಯನ್ನು ಸೂಚಿಸಿ ಕುಂತಿಯ ಕಾಲಿಗೆರಗಿದರು. ಕುಂತಿಯು ದ್ರೌಪದಿಯನ್ನು ಹಿಡಿದೆಬ್ಬಿಸಿ ಆಲಿಂಗಿಸಿ ಸೌಮಾಂಗಲ್ಯವತಿಯಾಗೆಂದು ಹರಸಿದಳು.

ಇದೀಗ ಕೇವಲ ಪೌರಾಣಿಕ ದೃಷ್ಟಿಯಲ್ಲಿ ಹಳೆಯ ಬೇರು ಮಾತ್ರ. ಆಧ್ಯಾತ್ಮಿಕ ದೃಷ್ಟಿಯ ಚಿಗುರು ಮೂಡಿಸುವುದಾದರೆ ಅವೆಷ್ಟೋ ಇವೆ.

ದ್ರೌಪದಿಯು, ಭಾರತಾಹವದಲ್ಲಿ ತಾನು ಪತಿಗಳೊಡನೆ ಆದ್ಯಂತವಾಗಿ ದೃಷ್ಟಿ ಸಮಷ್ಟಿಯಿಂದ ಹರಡಿರುವಳು. ವರಿಸಿದವ ತ್ರೈಲೋಕ್ಯ ವಿಜಯೀ ಪಾರ್ಥ. ಲೋಕದಲ್ಲಿ ಮಲ್ಲರ ಮಲ್ಲನಂತಿದ್ದವ ಭೀಮಸೇನ. ಅನೇಕ ಸಂಕಷ್ಟಗಳನ್ನು ಕೊಟ್ಟ ಶತ್ರುಗಳ ಮೇಲೆ ಮುನಿಯದ ಸಾತ್ವಿಕ ಹೃದಯೀ ಧರ್ಮರಾಯ. ಉಳಿದ ನಕುಲಸಹದೇವರು ಅಸಾಮಾನ್ಯ ಪರಾಕ್ರಮಿಗಳೇ ಆಗಿದ್ದರು. ದ್ರೌಪದಿಯು ಐವರು ಪತಿಗಳ ಮೇಲೂ ಅಸಾಧಾರಣ ವರ್ಚಸ್ಸು ಬೀರಿರುವಳು. ಪತಿಗಳಲ್ಲಿ ಕರ್ತವ್ಯ ಜಾಗ್ರತಿಯನ್ನುಂಟು ಮಾಡಿರುವಳು. ತಾನೂ, ಅಸಾಧಾರಣ ಸಂಕಷ್ಟಗಳನ್ನು ಅನುಭವಿಸಿ, ಇತರರಿಗೂ, ಸಂತೈಸಿರುವಳು; ಛಲವಾದಿನಿಯಾಗಿದ್ದವಳು. ಅವಳ ವ್ಯಕ್ತಿತ್ವವು ಅಸಾಮಾನ್ಯ.

ಸೀತಾ

ಜನಕರಾಯನು ಯಜ್ಞಕ್ಕಾಗಿ ನೆಲವನ್ನು ಶೋಧಿಸಿದಾಗ ಅಲ್ಲಿ ಸಿಕ್ಕಿದವಳು ಸೀತಾ. ಜನಕರಾಯನ ಮಗಳಾಗಿ ಬೆಳೆದು ಪ್ರಾಯಪ್ರಬುದ್ಧೆಯಾದಳು. ರೂಪವತಿಯಾದ ಮಗಳಿಗೆ ತಕ್ಕ ವರನಾರೆಂದು ಜನಕನು ಹಂಬಲಿಸುತ್ತಿರಲು ನಾರದರಿಂದ ಉಪಾಯ ತಿಳಿದನು. "ಯಾವಾತನು ಶಿವಧನುಸ್ಸನ್ನು ಬಾಗಿಸಿ ಸಿಂಜಿನಿಯನ್ನು ಜೋಡಿಸುವನೋ ಅವನೇ ಸೀತಾಪತಿ"ಯೆಂದು ಡಂಗುರ ಹೊಯಿಸಿದನು.

ಏತನ್ಮಧ್ಯೆ ದಶರಥ ಸುಕುಮಾರನಾದ ಶ್ರೀರಾಮನು ಲಕ್ಷ್ಮಣನೊಡನೆಯೂ, ಗುರುಗಳಾದ ವಿಶ್ವಾಮಿತ್ರರಿಂದಲೂ ಕೂಡಿಕೊಂಡು, ಅಹಲ್ಯಾ

ಶಾಪವಿಮೋಚನೆಗೈದು, ಮಿಥಿಲೆಯನ್ನು ಹೊಕ್ಕು, ಹರಧನುಸ್ಸಿನೊಡನೆ ಹೋರಾಡಿ, ಲೀಲಾಜಾಲವಾಗಿ ಧನುರ್ಭಂಗ ಮಾಡಿ, ಸೀತಾಪತಿಯಾದನು.

ಅಯೋಧ್ಯೆಯಲ್ಲಿ ಆ ಬಳಿಕ ವೃದ್ಧಾಪ್ಯ ಪ್ರಯುಕ್ತ ದಶರಥನು ಸೀಮಂತಪುತ್ರ ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಮಂತ್ರಿಸುತ್ತಿರಲು, ಮಂಥರೆಯ ದೂಷಣೆಯಿಂದ ಕೈಕೆಯಿಯ ಮಾತಿಗಾಗಿ ಶ್ರೀರಾಮನು ವನವಾಸವನ್ನು ಕೈಕೊಳ್ಳಬೇಕಾಯಿತು. ರಾಮನು ಸತಿಯಾದ ಸೀತೆಗೆ ವನವಾಸದ ಕಷ್ಟಗಳನ್ನು ವಿವರಿಸಿದರೂ ಅವಳು, ಪತಿಯಿದ್ದಲ್ಲೇ ತಾನು ಎನ್ನುತ್ತ, ಅವನೊಂದಿಗೆ ವನವಾಸಕ್ಕೆ ಹೊರಟಳು.

ಸೀತೆಯು ಯಾವ ಸುಖವನ್ನಾದರೂ ಬಯಸಲಿಲ್ಲವಾದರೂ ಪಂಚವಟಿಯಲ್ಲಿ ಶೂರ್ಪನಖಿಯ ಮಾನಭಂಗದ ಪ್ರತೀಕೆಯಿಂದಾಗಿ ಮಾರೀಚನ ಮಾಯದ ಜಿಂಕೆಗೊಂದು ಮರುಳಾದಳು ಅದೂ ಸತ್ಯತೆಯಿಂದ. ಮಾಯದ ಕೂಗು ಕೇಳಿ ಪತಿಯು ಕಷ್ಟದಲ್ಲಿ ಸಿಲುಕಿದನೆಂದು ನೆನಸಿ, ತನಗೆ ಕಾವಲು ಆಗಿದ್ದ ಲಕ್ಷ್ಮಣನನ್ನು ರಾಮನ ರಕ್ಷಣೆಗೆಂದು ಅಟ್ಟಿದಳು. ಸನ್ಯಾಸಿ ವೇಷದಲ್ಲಿ ಬಂದು ಲಂಕಾಧೀಶನು ಅವಳನ್ನೊಯ್ದನು; ಅಶೋಕವನದಲ್ಲಿರಿಸಿದನು. ರಾಮಾಯಣದಲ್ಲಿನ ಮುಂದಿನ ನಾಲ್ಕು ಕಾಂಡಗಳು, ಶ್ರೀರಾಮನ ಸಾಹಸಾದಿ ಸಕಲ ಗುಣಗಳನ್ನು ವರ್ಣಿಸುವಾಗ ಸೀತೆಯ ಪೂರ್ಣ ಚರಿತ್ರವನ್ನು ತಿಳಿಸುತ್ತವೆ. ಅವಳ ಮಹಿಮಾಪೂರ್ಣ ಕಥೆಯು ಸುಂದರಕಾಂಡ, ಯುದ್ಧಕಾಂಡ, ಉತ್ತರಕಾಂಡಗಳಲ್ಲಿ ಹರಡಿದೆ (ಮಂಡೋದರಿಯ ವ್ಯಕ್ತಿತ್ವವೂ ನಮಗೆ ಸುಂದರಕಾಂಡ—ಯುದ್ಧಕಾಂಡಗಳಲ್ಲಿ ಅಲ್ಲಲ್ಲಿ ಸ್ಪಷ್ಟವಾಗುತ್ತದೆ.) ಸೀತೆಯು ಅಶೋಕವನದಲ್ಲಿ ಕಳೆದ ವರ್ಷಗಳು, ರಾವಣ ಸಂಹಾರದ ನಂತರ ಶ್ರೀರಾಮನನ್ನು ಸೇರಿ ಅಯೋಧ್ಯೆಗೆ ಮರಳಿ, ಗರ್ಭವತಿಯಿದ್ದಾಗ ಸೀತೆಯು ಪತಿಯಿಂದಲೇ ಕಾಡಿಗೆ ಕಳಿಸಲ್ಪಟ್ಟುದು, ಲವ-ಕುಶರ ಜನನ, ಮುಂದೆ ಅವಳ ಅಗ್ನಿಪರೀಕ್ಷೆ— ಇದೆಲ್ಲ ರಾಮಾಯಣದಲ್ಲಿ ಸೀತೆಯ ವ್ಯಕ್ತಿತ್ವವನ್ನು ವಿವರಿಸಿದೆ.

ತಾರಾ

ಅಮೃತಮಥನ ಕಾಲದಲ್ಲಿ ಆವಿರ್ಭವಿಸಿದ ಅನೇಕ ಜೀವರಾಶಿಗಳಲ್ಲಿ ತಾರೆಯೂ ಒಬ್ಬಳು. ಕಿಷ್ಕಿಂಧೆಯೆಂಬ ರಾಜ್ಯದಲ್ಲಿ ಕಿಶೋರಕುಲೋತ್ಪನ್ನ

ವಾಲಿಯೆಂಬ ಪರಾಕ್ರಮಿ ಇದ್ದನು. ವಾಲಿಯ ಪತ್ನಿಯೇ ತಾರಾ. ವಾಲಿಯ ತಮ್ಮನಾದ ಸುಗ್ರೀವನೆಂಬವನೂ ಇರುತ್ತಿದ್ದನು.

ವಾಲಿಯು ತಾರೆಯೊಡನೆ ಅನೇಕ ವರ್ಷಕಾಲ ಏಕಹೃದಯದಿಂದ ಬಾಳಿದ್ದನು. ವಾಲಿಯ ಪ್ರತಿಯೊಂದು ಕಾರ್ಯಗಳಲ್ಲೂ ತಾನೂ ಸಹ ಭಾಗಿನಿಯಾಗಿದ್ದಳು. ಇವರ ಪ್ರೇಮದ ಜೀವನದ ಚಿಗುರಾಗಿ ಅಂಗದನೆಂಬ ಪುತ್ರನೂ ಜನಿಸಿದನು. ರಾಜ್ಯಭಾರಕ್ಕಾಗಿ ವಾಲಿಯು ಎಷ್ಟು ಸಾಹಸಪಡುತ್ತಿದ್ದನೋ ಅಷ್ಟೇ ಕಾರ್ಯಗಳಲ್ಲಿ ತಾರೆಯು ಒಂದಾಗಿದ್ದಳು. ಅರಸಿಯ ಮೇಲೆ ವಾಲಿಗೆ ಬಹುಪ್ರೀತಿ ಇತ್ತು.

ಪ್ರತಿದಿನವೂ ನಾಲ್ಕು ಸಮುದ್ರಗಳಲ್ಲೂ ಸ್ನಾನಮಾಡಿ ಸೂರ್ಯಾರ್ಘ್ಯ ಕೊಡುತ್ತಿದ್ದನು. ಒಂದು ದಿನ ಲವಣಾಂಬುಧಿಯಲ್ಲಿ ಅರ್ಘ್ಯಕೊಡುತ್ತಿದ್ದಾಗ ರಾವಣನು ಹಿಂದಿನಿಂದಲೇ ಬಂದನು. ಆಗ ವಾಲಿಯು ತನ್ನ ಲಾಂಗೂಲದಲ್ಲಿ ಕಟ್ಟಿ ತನ್ನ ರಾಜಕೊಠಡಿಯಲ್ಲಿ ಅಂಗದನ ತೊಟ್ಟಿಲಿಗೆ ಕಟ್ಟಿ ಬಿಟ್ಟನು — ಎಂದೂ ಕಥೆಯಿದೆ.

ಹೀಗೆ ಕಾಲವು ಸವೆಯುತ್ತಿರಲು ಓರ್ವ ರಾಕ್ಷಸನ ಉಪಟಳದಿಂದಾಗ ಅಣ್ಣತಮ್ಮಂದಿರೊಳಗೆ ವೈಷಮ್ಯ ಉಂಟಾಯಿತು. ಆಗ ತಾರೆಯು ದಾಯಾದ್ಯಮತ್ಸರವು ಯಥೋಚಿತವಲ್ಲವೆಂದರೂ, ವಾಲಿಯು ಕೇಳಲಿಲ್ಲ.

ಇತ್ತ ಸುಗ್ರೀವನು ಪತ್ನೀವಿರಹದಿಂದ ಕಾನನ ಕಾನನ ಅಲೆಯುತ್ತಿರುವ ಶ್ರೀರಾಮನ ಸಖ್ಯತ್ವವನ್ನು ಪಡೆದನು. ರಾಮನ ಮಾತಿನಂತೆ ಸುಗ್ರೀವನು ವಾಲಿಯನ್ನು ಯುದ್ಧಕ್ಕಾಗಿ ಕರೆದನು. ಆ ಸಮಯದಲ್ಲಿ ತಾರೆಯು ಸಾಕಷ್ಟು ಸಮಾಧಾನ ಹೇಳಿದರೂ ವಿಧಿಯು ಅತ್ತ ಸೆಳೆಯಿತು. ರಾಮನ ಬಾಣದಿಂದ ಹತನಾದನು. ವೈಧವ್ಯದುಃಖದಿಂದ ಬಳಲುತ್ತಿರುವ ತಾರೆಯನ್ನು ಶ್ರೀರಾಮನು "ವೀರಪತ್ನೀ, ದುಃಖಪಡದಿರು. ತ್ರಿಲೋಕವಾದರೂ ಇಂದಲ್ಲ ನಾಳೆ ಕಾಲನ ವಶವಾಗಲೇ ಬೇಕು. ತನ್ಮಧ್ಯದಲ್ಲಿ ಜೀವಿಸುವ ನಾವುಗಳು ಧರ್ಮಕ್ಕೆ ಚ್ಯುತಿಬಾರದಂತೆ ನಡೆಯುವುದೇ ನಮ್ಮ ಶ್ರೇಯಸ್ಸು. ನೀನು ಕುಲಕ್ಕನುಸಾರವಾಗಿ ಧರ್ಮವತಿಯಾಗಿ ಒಂದೇ ಹೃದಯಿಯಾಗಿ ಬಾಳಿದ್ದೆ. ಅಳಿದ ವಿಷಯವನ್ನು ಹಳಿ. ನಿನ್ನ ಪುತ್ರನ ಸಾಹಸವನ್ನು ನೋಡು. ನಿನ್ನ ಹೆಸರು ಜಗದ್ವ್ಯಾಪ್ತವಾಗಲಿ" ಎಂದು ಹರಸಿದನು.

ರಾಮಾಯಣದಲ್ಲಿ ತಾರೆಯ ಕಥೆ ಚಿಕ್ಕದು. ಸೂಕ್ಷ್ಮದೃಷ್ಟಿಯಿಂದ ತಿಳಿದರೆ ತಾರಾದೇವಿಯು ಒಂದು ವರ್ಗದ ಪ್ರತಿನಿಧಿಯಾಗಿದ್ದಳೆಂದು ತಿಳಿವುದು.

ಮಂಡೋದರಿ

ಅಸುರಶಿಲ್ಪಿಯಾದ ಮಯಾಸುರನು ತನ್ನ ಕಲಾಕುಶಲತೆಯಿಂದಲೂ ವರಬಲಾತ್ಕಾರದಿಂದಲೂ, ಒಂದು ಹೆಣ್ಣುಮಗಳನ್ನು ಸೃಷ್ಟಿಸಿದನು. ಪರಾಕ್ರಮಿಯ ವಾಮಭಾಗದಲ್ಲಿ ಕುಳ್ಳಿರಿಸಬೇಕೆಂದು ಮಗಳಾದ ಮಂಡೋದರಿಯೊಡನೆ ಹೊರಟನು.

ಲಂಕಾಧೀಶನಾದ ರಾವಣನು ದಿಗ್ವಿಜಯಕ್ಕಾಗಿಹೊರಟ್ಟಿದ್ದನು. ಮಧ್ಯಮಾರ್ಗದಲ್ಲಿ ಮಯಾಸುರನ ಭೇಟಿಯಾಯಿತು. ವಿಷಯವನ್ನು ತಿಳಿದ ಮೇಲೆ ಮಂಡೋದರಿಯನ್ನು ರಾವಣನು ವಿವಾಹಮಾಡಿಕೊಂಡು ಲಂಕೆಗೆ ಹಿಂತೆರಳಿದನು. ಲಂಕೆಯಲ್ಲಿ ಕ್ರೂರಕರ್ಮಿಗಳ ಮಧ್ಯದಲ್ಲಿ ಮಂಡೋದರಿಯು ರಾಣಿಯಾದಳು.

ರೂಪದಲ್ಲಿ ಅಪ್ರತಿಮಳಿವಳು. ಗುಣದಲ್ಲಿ ಲಕ್ಷಣಸಂಪನ್ನೆ. ಲೋಕಕಂಟಕ ರಾವಣನ ಕೈಹಿಡಿದು "ಅನೇಕ ಕಲ್ಮಷದುಂಬಿದ ಸರೋವರದಲ್ಲಿ ಕಮಲದಂತೆ ಬಾಳಿದ್ದಳು." ಮಂಡೋದರಿಯ ಭಾಗ್ಯದಿಂದಾಗಿಯೇ ರಾವಣನು ತ್ರಿಲೋಕವಿಜಯಿಯಾದನು; ಇಂದ್ರನನ್ನು ಮೆಟ್ಟುವ ಮಗನನ್ನು ಪಡೆದನು.

ಸೀತೆಯನ್ನು ರಾಜ್ಯಕ್ಕೆ ತರುವುದು ಸಮ್ಮತವಲ್ಲವೆಂದು ಮಂಡೋದರಿಯು ಹಲವು ಬಾರಿ ತನ್ನ ಪತಿಗೆ ಬೋಧಿಸಿದ್ದಳು. ಅಗ್ನಿಕಣದಂತಹ ಸೀತೆಯು ಸಿರಿಮುಡಿಯೆಂದು ಸಾರಿ ಸಾರಿ ಹೇಳಿದ್ದಳು. ಅಶೋಕವನದಲ್ಲಿ ಸೀತೆಗೆ ಹಾನಿಬಾರದಂತೆ ತಡೆದುದರಲ್ಲಿ ಈಕೆಯ ಯತ್ನವಿತ್ತು. ತನ್ನ ಪತಿಯ ಅಕೃತ್ಯಕ್ಕಾಗಿ ಮರುಗಿದರೂ—ಪತಿಪ್ರೇಮವು ಅವಳಲ್ಲಿ ತಿಲಾಂಶವೂ ಕಡಿಮೆಯಾಗಲಿಲ್ಲ.

ಲಂಕಾದಹನ, ಸೇತುಬಂಧನ, ವಿಭೀಷಣ ತ್ಯಾಗ, ಹೆಚ್ಚೇಕೆ ಯುದ್ಧದಲ್ಲಿ ತನ್ನವರೇ ಆದ ಕುಂಭಕರ್ಣ, ಅತಿಕಾಯ ಇವರೇ ಮೊದಲಾದವರು ಯಮಸದನಕ್ಕೈದಿದರು. ಮೋಹದ ಮಗ ಇಂದ್ರಾರಿಯೂ ದೂರವಾ

ದನು. ಈ ವರ್ತಮಾನವನ್ನು ಕೇಳಿ ರಾವಣನು ಮುಮ್ಮಲ ಮರುಗಿ, ಅಂತಃಪುರವನ್ನು ಪ್ರವೇಶಿಸಿ, "ಮೋಹನೇ! ನಿನ್ನ ಮಾತನ್ನು ಕೇಳದೆ ಅಗ್ನಿಕುಂಡಕ್ಕೆ ಕೈಯಿಕ್ಕಿದೆ. ನಿನ್ನ ಮಾತು ಕರಗಿಸಿದ ಸೀಸವಾಯ್ತು. ಮೋಹದ ಮಗನು ಹೋದನು. ಇನ್ನಿತರ ಯುದ್ಧಭಟರ ಧೈರ್ಯೋತ್ಸಾಹಗಳು ಕುಂದಿವೆ. "ಚಿನ್ನಾ, ನೀನಂದಂತೆ ಮಾಡುವೆನು" ಎಂದು ಪ್ರಲಾಪದಿಂದ ನುಡಿದನು; ಕಲ್ಲೆದೆ ಕರಗಿತ್ತು.

ಮಕ್ಕಳು ಮೃತರಾದರೆಂದರೆ, ಹೆತ್ತ ಕರುಳು ಮುಸಿಯಬೇಕಿತ್ತು. ಆದರೆ, "ಕಾಂತಾ! ನೀರಿಗಿಳಿದರೆ ಈಜಬೇಕು ನ್ಯಾಯ. ಆದರೆ, ಬೇಡ, ಪರಸ್ತ್ರೀ ಅಪಹಾರದ ಫಲವು ಬಿಡಲಾರದು. ದೈವಾಂಶಜರೆಂದು ಅವರನ್ನು ತಿಳಿಯುವುದು ಬೇಡ, ಪರಸ್ತ್ರೀ ಎಂಬುದನ್ನಾದರೂ ತಿಳಿದು ಆ ಸೀತೆಯನ್ನು ಹಿಂದೆ ಕೊಡುವುದು ಒಳಿತು. ನಿಮಗೆ ಲಜ್ಜೆಯಾದರೆ ನಾನೇ ಆ ಸೀತೆಯನ್ನು ರಾಮನಿಗೊಪ್ಪಿಸಿ ಕ್ಷಮೆ ಯಾಚಿಸುವೆನು" ಎಂದಳು. ಆಗ ರಾವಣನು, ಮನೋವಿಕಾರ ಹೊಂದಿ, ಜಗ್ಗನೆ ಎದ್ದು, "ಆಗದು! ಪುತ್ರರು ಹೋಗಲಿ! ರಾಜ್ಯವು ಹೋಗಲಿ! ಶರೀರದ ಮೇಲೆ ಆಸೆ ಇಲ್ಲ. ಈ ತನುವಿನಲ್ಲಿ ಪ್ರಾಣವಾಯು ಸಂಚರಿಸುವ ತನಕ ಸೀತೆಯನ್ನು ಕೊಡಲಾರೆ" ಎಂದು, ಹೊರಟನು. ಭಯಂಕರ ಯುದ್ಧದಲ್ಲಿ ಮೃತಿಹೊಂದಿದನು.

ಪತಿವಿಯೋಗದಿಂದ ದುಃಖಿಸುತಿದ್ದ ಮಂಡೋದರಿಯನ್ನು ಕುರಿತು ಶ್ರೀರಾಮನು—"ಮಂಡೋದರೀ, ಅಳದಿರು. ನಿನ್ನವನು ಪರಾಕ್ರಮಿ. ದೈತ್ಯಾವೇಶದಿಂದ ಹಾಳುಮನಸ್ಸು ಮಾಡಿ ಹಾನಿಹೊಂದಿದನು. ನೀನು ತಕ್ಕ ಸಮಯಗಳಲ್ಲಿ ಸೂಕ್ತ ಸಲಹೆಗಳನ್ನು ಹೇಳಿದ್ದೆ. ನೀನು ಪತಿವ್ರತೆಯೆಂಬುದನ್ನು ಲೋಕವು ಕೊಂಡಾಡುತ್ತಿದೆ. ನೀನು ಕೈಹಿಡಿದುದು ವೈಕುಂಠ ದ್ವಾರಪಾಲಕ ಜಯನೆಂಬ ಗಂಧರ್ವನನ್ನು. ಆತನು ದೈತ್ಯಾವೇಶದಿಂದ ಬಾಳಿದ್ದರೂ ಈಗ ದಿವ್ಯರೂಪದಿಂದ ಮೆರೆದಾಡುತ್ತಿರುವನು. ನೀನು ಅಳದಿರು."

ಕೈಹಿಡಿದ ಪತಿಯು ದುಷ್ಟನಾದರೂ ತನ್ನ ಬಾಳನ್ನು ಲೋಕವು ಕೊಂಡಾಡುವಂತೆ ಮಂಡೋದರಿಯು ಮೆರೆದಾಡಿದಳು. ಋಷಿ ಪತ್ನಿಯಾದ ಅಹಲ್ಯೆಯೂ, ಪಾಂಡವರ ಪತ್ನಿ ದ್ರೌಪದಿಯೂ, ರಾಮನ ಮಡದಿ ಸೀತೆಯೂ, ವಾಲಿಯ ಪತ್ನಿ ತಾರೆಯೂ, ರಾವಣನ ಮಡದಿ ಮಂಡೋದ

ರಿಯೂ ಒಂದೊಂದು ದೃಷ್ಟಿಯಲ್ಲಿ ತಮ್ಮ ತಮ್ಮ ಬಾಳನ್ನು ವ್ಯವಹರಿಸಿಕೊಂಡಿದ್ದರೂ ಈ ಐವರ ಮನೋಧರ್ಮಗಳೂ ಒಂದಾಗಿದ್ದುವು. ಮಾನವನ ಪ್ರತಿಯೊಂದು ಬಾಳನ್ನು ಈ ಪಂಚ ಹೆಂಗಳೆಯರಿಗೆ ಉದಾಹರಿಸಿಕೊಳ್ಳಬಹುದು. ಆದರೆ, ಅವರಂತೆ ಆಚರಿಸುವುದು ಮಾತ್ರ ಕಷ್ಟಸಾಧ್ಯ. ಅದಕ್ಕಾಗಿ ಈ ಪಂಚಕನ್ಯೆಯರ ದಿವ್ಯನಾಮಾಮೃತವನ್ನೂ ನಿತ್ಯ ಸ್ಮರಿಸತಕ್ಕದೆಂದು ಈ ಲೇಖನದ ಸಾರಾಂಶ.

ಇಲ್ಲಿಗೆ ಪಂಚಕನ್ಯೆಯರ ಕಥೆ ಮುಗಿಯಿತು.

ಚಿರಂಜೀವಿಗಳು

ಶ್ಲೋಕ|| ಅಶ್ವತ್ಥಾಮೋ ಬಲಿರ್ವ್ಯಾಸಃ ಹನೂಮಾಂಶ್ಚ ವಿಭೀಷಣಃ|
ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ||

ಈ ಏಳು ಮಂದಿಯ ಸ್ಮರಣೆಯನ್ನು ನಿತ್ಯವೂ ಯಾರು ಮಾಡುವನೋ ಅವನು ಜ್ಞಾನಸಂಪತ್ತಿನಿಂದಲೂ ಸೌಭಾಗ್ಯದಿಂದಲೂ ಕೂಡಿದವನಾಗುವನು. ಇವರು ಏಳು ಮಂದಿ ಚಿರಂಜೀವಿಗಳು.

ಇವರಲ್ಲಿರುವ ವಿಶೇಷತೆ ಏನು? ಎಂದರೆ ಪ್ರತಿಯೊಬ್ಬ ಮಾನವನೂ ತನ್ನ ಜೀವಮಾನದಲ್ಲಿ ಚಿರಧರ್ಮದ ಪ್ರಗತಿಸಾಧನೆಯನ್ನು ಸಂಪಾದಿಸಬೇಕು. ಸುಖದುಃಖಾದಿ ಲಾಭಾಲಾಭ ಜಯಾಪಜಯಗಳಲ್ಲಿ ಈ ಶರೀರವನ್ನು ಬೆಳೆಸುವೆವು. ಆದರೆ ತನ್ನ ಜೀವನದಲ್ಲಿ ಪ್ರಗತಿಪಥವಾದ ಮುಂಬೆಳಕನ್ನು ಪಡೆಯಬೇಕು. ಆ ದೃಷ್ಟಿ ಇವರಲ್ಲಿದೆ. ಆಜನ್ಮ ಬ್ರಹ್ಮಚಾರಿಯಾಗಿಯೂ, ರಾಜನಾಗಿಯೂ, ರಾಜನ ಬಂಟನಾಗಿಯೂ, ಋಷಿಕುಲೋತ್ತಮರಾಗಿಯೂ, ಬಾಳಿ, ತಮ್ಮದೇ ಆದ ಪರಗತಿಯ ಸಾಧನೆಯನ್ನು ಲೋಕ ವ್ಯವಹಾರದೊಂದಿಗೆ ಕೂಡಿ ಸಾಧಿಸಿಕೊಂಡಿರುವರು. ಎಷ್ಟೋ ಮಂದಿ ಐಹಿಕಸುಖವನ್ನು ತೊರೆದು ಮುಂದಿನ ಗತಿಗೆ ಪಥವನ್ನು ಕೂಡಿಟ್ಟಿರಬಹುದು. ಆದರೆ ಅವರುಗಳಲ್ಲಿಯೂ ಆರಿಸಿಕೊಳ್ಳುವುದಾದರೆ ಈ ಏಳು ಮಂದಿಯನ್ನೇ ಇವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನಿಲ್ಲಿ ಕೊಡಲಾಗಿದೆ.

ಅಶ್ವತ್ಥಾಮನು

ಅಶ್ವತ್ಥಾಮನು ದ್ರೋಣಾಚಾರ್ಯರ ಪುತ್ರ. ಕುರುಕುಲ ಮಹಿಪತಿಯೊಡನೆ ಬಾಳಿ ಬೆಳೆದವನು. ಸ್ವಾಮಿಕಾರ್ಯಕ್ಕಾಗಿ ಕುರುಪಕ್ಷವನ್ನೇ ವಹಿಸಿ ಪಾಂಡವ ಸೇನೆಯೊಡನೆ ಕೆಲವು ದಿನ ಯುದ್ಧ ಮಾಡಿರುವನು. ಹದಿನೆಂಟನೆ ದಿನದ ಯುದ್ಧದಲ್ಲಿ ಭೀಮನ ಗದಾಪ್ರಹಾರದಿಂದ ರಣರಂಗದಲ್ಲಿ ಬಿದ್ದ ಸುಯೋಧನನ ಇಚ್ಛೆಯಂತೆ ದ್ರೌಪದಿಯ ಪಂಚಪುತ್ರರ ಶಿರವನ್ನು ತರಿದುತಂದು ತೋರಿಸಿದನು. ಅಲ್ಲಿಗೂ ಕೋಪಶಾಂತಿಯಾಗದೆ, ಚಕ್ರವ್ಯೂಹದಲ್ಲಿ ಮಡಿದ ಅಭಿಮನ್ಯುವಿನ ಪತ್ನಿ ಉತ್ತರೆಯ ಗರ್ಭದಲ್ಲಿ ಬೆಳೆಯುತ್ತಿರುವ ಪಾಂಡವ ಕುಲೋದ್ಧಾರಕ ಪಿಂಡವನ್ನು ಮಂತ್ರಾಸ್ತ್ರದಿಂದ ಸಂಹರಿಸಬೇಕೆಂದು ಪ್ರಯೋಗಿಸುವನು. ಆದರೆ ಉತ್ತರೆಯು ಕೃಷ್ಣನ ಸ್ಮರಣೆಯಿಂದ ಪಾರಾದಳು. ಇದನ್ನರಿತ ಅರ್ಜುನನು ದ್ರೌಣಿಯನ್ನು ಕೊಲ್ಲುವುದೆಂದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ರಣಪರಾಕ್ರಮಿ ದ್ರೌಣಿಯೂ ಬ್ರಹ್ಮಾಸ್ತ್ರವನ್ನು ಸಂಧಾನಮಾಡಿದನು. ಎರಡು ಬ್ರಹ್ಮಾಸ್ತ್ರಗಳೂ ಒಂದಾಗಿ ಭೂಲೋಕವನ್ನು ಸುಡುವಂತೆ ಕಿಡಿಕಾರುತ್ತಿದ್ದುವು. ಶ್ರೀಕೃಷ್ಣನ ಮಾತಿನಂತೆ ಎರಡು ಬ್ರಹ್ಮಾಸ್ತ್ರಗಳನ್ನೂ ಅರ್ಜುನನು ಸ್ವೀಕರಿಸಿದನು. ಬಳಿಕ ಸೋತ ಅಶ್ವತ್ಥಾಮನು ಕೃಷ್ಣನ ಪಾದಕ್ಕೆರಗಿದಾಗ ಕೃಷ್ಣನು ಅವನ ಶಿರದಲ್ಲಿರುವ ಮಣಿಯನ್ನು ತೆಗೆದು, "ಬದರಿಕಾಶ್ರಮದಲ್ಲಿ ಚಿರಂಜೀವಿಯಾಗಿ ತಪಸ್ಸಿನಿಂದ ಕಾಲಕಳೆಯುತ್ತಿರೆ"ಂದು ಹರಸಿ ಬೀಳ್ಕೊಟ್ಟನು. (ಸುಯೋಧನನು ಸರ್ವಸ್ವವನ್ನು ಕಳಕೊಂಡರೂ, ಅಶ್ವತ್ಥಾಮನು ಅವನ ಕೈಬಿಡದೆ ಅಚಲನಿಷ್ಠೆಯಿಂದ ಕೊನೆತನಕ ಕಾದಿದ ಕಥೆಯು ಅತ್ಯಂತ ಮಾರ್ಮಿಕವಾಗಿದೆ. ಬಾಲಹತ್ಯಾದೋಷ ಹೊಂದಿದರೂ, ಅಶ್ವತ್ಥಾಮನು ಕೀಳುಹೃದಯದವನಾಗಿರಲಿಲ್ಲವೆಂದೂ ಕಥೆ ಸಾರುತ್ತಿದೆ.)

ಬಲಿ

ಭೂಲೋಕದಲ್ಲಿ ಬಲಿರಾಜನು ರಾಜ್ಯವನ್ನಾಳುತ್ತಿದ್ದನು. ಪ್ರಜೆಗಳನ್ನು ತನ್ನ ಮಕ್ಕಳಂತೆ ಪಾಲಿಸುತ್ತಿದ್ದನು. ದೈವಿಕ ಭಕ್ತಿ, ಪ್ರಾಣಿ ದಯೆ, ಇವೆಲ್ಲವೂ ಅವನಲ್ಲಿತ್ತು. ಸಂಪತ್ತಿನಿಂದ ಮೆರೆದಾಡುತ್ತಿದ್ದನು. ತನ್ನ

ಜೀವನ ಸಾಫಲ್ಯಕ್ಕಾಗಿ ಒಂದಲ್ಲ, ಎರಡಲ್ಲ, ನಾಲ್ಕಲ್ಲ, ಹತ್ತಲ್ಲ ಏಕೋನ ಶತ ಯಾಗವನ್ನು ಮುಗಿಸಿದನು. ನೂರನೇ ಯಾಗವನ್ನೂ ಆರಂಭಿಸಿದನು. ಯಾವ ಪ್ರತಿಫಲಾಪೇಕ್ಷೆಯೂ ಆತನಿಗಿಲ್ಲವಾದರೂ ಶತಯಾಗ ಮಾಡಿದ ಮಹಾತ್ಮನಿಗೆ ದೇವೇಂದ್ರ ಪದವಿ ಕಟ್ಟಿಟ್ಟ ಗಂಟು.

ಇದನ್ನರಿತ ಶಚೀಪತಿಯು ತನ್ನ ಪದಕ್ಕೆ ಚ್ಯುತಿ ಬರುವುದೆಂಬ ಭಯ ದಿಂದ ಶ್ರೀ ಹರಿಯಲ್ಲಿ ಮೊರೆಯಿಟ್ಟನು. ಭಕ್ತನನ್ನು ಪೊರೆಯುವುದಕ್ಕಾಗಿ ಪರಮಾತ್ಮನು ವಾಮನಾವತಾರಿಯಾಗಿ ದಾನಿಯಾದ ಬಲಿ ಚಕ್ರವರ್ತಿಯ ಆಸ್ಥಾನಕ್ಕೆ ಬಂದನು. ಮೂರು ಪಾದ ಸ್ಥಳವನ್ನು ಯಾಚಿಸಿದನು. ಶುಕ್ರಾ ಚಾರ್ಯರು ತಡೆದರೂ,ಬಲಿಯು ಕೊಡಲೊಪ್ಪಿ ಧಾರೆಯೆರೆದನು. ವಾಮ ನಾವತಾರಿಯು ಎರಡು ಹೆಜ್ಜೆಯಳತೆಯಿಂದ ಈರೇಳು ಲೋಕವನ್ನಳೆದು ಮೂರನೆ ಪಾದದಳತೆಯಿಂದ ಬಲಿಚಕ್ರವರ್ತಿಯ ಶಿರದಲ್ಲಿ ಕಾಲನ್ನಿಟ್ಟು ಚಕ್ರ ವರ್ತಿಯನ್ನು ಪಾತಾಳಕ್ಕೊತ್ತಿದನು. ಆಗ ನಮ್ರೀಭೂತನಾದ ಬಲಿಯು, "ಪರಮಾತ್ಮಾ! ನನ್ನ ಮನೆಯಲ್ಲಿ ಸದಾ ದರ್ಶನವೀಯುತ್ತಿರಬೇಕು. ಯಜ್ಞ ಸಂಪೂರ್ಣವಾಗುವಂತೆ ಅನುಗ್ರಹಿಸಬೇಕೆಂ"ದು ಕೇಳಿದಾಗ "ತಥಾಸ್ತು" ಎಂದು, ಇಹಜನ್ಮದಲ್ಲಿ ಚಿರಂಜೀವಿಯಾಗಿಸಿ, ಪರಜನ್ಮದಲ್ಲಿ ಇಂದ್ರಪದವಿ ಯನ್ನು ಕರುಣಿಸಿದನು.

ವ್ಯಾಸ

ಋಷಿಕುಲೋತ್ತಮರಾದ ಪರಾಶರ ಮಹರ್ಷಿಗಳು ಒಮ್ಮೆ ಯಮುನಾ ನದಿಯನ್ನು ದಾಟುತ್ತಿರಲು, ಅಂಬಿಗಕನ್ಯೆಯಾಗಿದ್ದ ಮತ್ಸ್ಯಗಂಧಿನಿ ಎಂಬವ ಳನ್ನು ಕಂಡು ಮನಸೋತರು. ಅವಳ ಇಚ್ಛೆಯಂತೆ ಋಷಿಗಳು, ಅವಳನ್ನು ಶುಚಿಗೊಳಿಸಿ, "ಯೋಜನಗಂಧಿ" ಎಂದು ಅಂಕಿತವಿಟ್ಟು, ಸಂಸಾರ ಹೂಡಿ ದರು. ಅವಳ ಗರ್ಭದಲ್ಲಿ ಜನಿಸಿದವರೇ ವೇದವ್ಯಾಸಮಹರ್ಷಿಗಳು. ಇವರು ಜ್ಞಾನಸಂಪತ್ತಿನಿಂದ ಕೂಡಿದವರಾಗಿದ್ದರು. "ಯೋಜನಗಂಧಿಯ ಕನ್ಯತ್ವವು ಹಾಳಾಗದಿರಲಿ" ಎಂದು ಕರುಣಿಸಿ ಪರಾಶರ ಮಹರ್ಷಿಗಳು ತಪೋವನಕ್ಕಾಗಿ ತೆರಳಿದರು. ಶಂತನು ಎಂಬ ರಾಜನು ಯೋಜನಗಂಧಿಯೊಡನೆ ವಿವಾಹಿತ ನಾದನು. ಅವಳಲ್ಲಿ ಚಿತ್ರವೀರ್ಯ–ವಿಚಿತ್ರವೀರ್ಯರೆಂಬ ಮಕ್ಕಳು ಜನಿಸಿದರು. ಪುತ್ರರಿಗೆ ಪ್ರಾಯಬರುತ್ತಿರಲು,ಭೀಷ್ಮಾಚಾರ್ಯರ ಸಹಾಯದಿಂದ ಅಂಬಿಕೆ–

ಅಂಬಾಲಿಕೆ ಎಂಬವರನ್ನು ವಿವಾಹಮಾಡಿಸಿದರು. ಆದರೆ, ದೈವವಶಾತ್ ಕಾಲನ ಬಾಯಿಗೆ ಚಿತ್ರ-ವಿಚಿತ್ರವೀರ್ಯರು ಆಹುತಿಯಾದರು. "ಸಂತಾನ ವಿಚ್ಛಿನ್ನವಾಯಿತೇ!?" ಎಂದು ಶೋಕದಲ್ಲಿರಲು, ಭೀಷ್ಮಾಚಾರ್ಯರ ಮಾತಿನಂತೆ ಅಂಬಿಕೆ-ಅಂಬಾಲಿಕೆಯರು ವೇದವ್ಯಾಸರ ಅನುಗ್ರಹದಿಂದ ಧೃತರಾಷ್ಟ್ರ-ಪಾಂಡು ಎಂಬ ಈರ್ವರನ್ನು ಪಡೆದರು. ಅವರಿಂದಲೇ ಕುರುಕುಲ ವಂಶಪೀಳಿಗೆಯಾಯ್ತು. ವ್ಯಾಸರು ಲೋಕದ ಕುಮತಿ ವಿವಾದಿಗಳ ವಾದವನ್ನು ಖಂಡಿಸಿ ಸಚ್ಛಾಸ್ತ್ರವನ್ನು ಬೋಧಿಸಿ, ವೇದವನ್ನು ನಾಲ್ಕು ವಿಭಾಗವನ್ನಾಗಿ ಮಾಡಿದರು. ಅಲ್ಲದೆ ದ್ವಾಪರಯುಗದಲ್ಲಿ ನಡೆದ ಭಾರತಾಹವವನ್ನು ಮನೋಹರವಾಗಿ ಲಿಖಿಸಿದರು. ಇದು ಜಗತ್ತಿನ ಶ್ರೇಷ್ಠ ಕಾವ್ಯ.

ಹನುಮಾನ್

ರಘುಕುಲೋತ್ತಮ ರಾಮನ ಬಲಗೈಬಂಟನೇ ವೀರಹನುಮಂತ. ಅಂಜನಾದೇವಿಯ ಗರ್ಭದಲ್ಲಿ ವಾಯುವಿನ ಕೃಪೆಯಿಂದ ಜನಿಸಿದನು. ಜನಿಸಿದಾಕ್ಷಣವೇ ಸೂರ್ಯಮಂಡಲ ಪರಿಯಂತರ ಹಾರಿ, ದೇವೇಂದ್ರನ ವಜ್ರಾಯುಧದಿಂದ ಹೊಡೆಸಿಕೊಂಡವನಾಗಿ 'ವಜ್ರಶರೀರಿ' ಎಂದು ಬ್ರಹ್ಮನಿಂದ ವರಪಡೆದನೆಂದು ಉಲ್ಲೇಖವಿದೆ. ಬಳಿಕ ತಾಯಿಯ ಮಾತಿನಂತೆ ಕಿಷ್ಕಿಂಧೆಯಲ್ಲಿ ನೆಲೆಸುತ್ತಿರಲು, ಶ್ರೀ ರಾಮನ ದರ್ಶನವನ್ನು ಪಡೆದು ರಾಮಾಯಣದಲ್ಲಿಯೂ ಮುಂದೆ ಮಹಾಭಾರತದಲ್ಲಿಯೂ ಮೆರೆದಿರುವನು. ಅಯೋಧ್ಯಾಪತಿಯು ಭಾವೀಕಲ್ಪದ ಬ್ರಹ್ಮಪದವಿಯನ್ನು ಅನುಗ್ರಹಿಸಿದನು. ಅಲ್ಲದೆ, ತನ್ನ ದಿವ್ಯಮೂರ್ತಿಯನ್ನು ಹನುಮಂತನ ಹೃದಯಮಧ್ಯದಲ್ಲಿ ನಿಲ್ಲಿಸಿ ಅನುಗ್ರಹಿಸಿದನು. ರಾಜನ ಭೃತ್ಯನಾಗಿ ತನುಮುರಿದು ಸಾಹಸಪಟ್ಟ ಹನುಮಂತನ ಗುಣವನ್ನು ರಾಮಾಯಣದ ಉದ್ದಕ್ಕೂ ಕಾಣಬಹುದು.

ವಿಭೀಷಣ

ಪುಲಸ್ತ್ಯವಂಶಜ ವಿಶ್ರವಸು ಮುನಿಗಳಿಗೆ ರಾವಣ, ಕುಂಭಕರ್ಣ, ವಿಭೀಷಣ, ಶೂರ್ಪನಖಿ ಎಂಬ ನಾಲ್ವರು ಪುತ್ರರು ಜನಿಸಿದರು. ಅವರಲ್ಲಿ ವಿಭೀಷಣನು ದೈವಭಕ್ತ, ಸಾತ್ವಿಕ ಹೃದಯಿ, ನ್ಯಾಯಾನ್ಯಾಯಗಳ ವಿಚಾರವಂತನು. ತನ್ನ ಅಣ್ಣಂದಿರು ಕ್ರೂರಕರ್ಮಿಗಳಾದರೂ ಅವರ ಮಧ್ಯ

ದಲ್ಲಿ ಸಾತ್ವಿಕ ಹೃದಯಿಯಾಗಿಯೇ ವಿಭೀಷಣನು ಕಾಲಕಳೆಯುತ್ತಿದ್ದನು. ರಾವಣನಿಗೆ ಎಷ್ಟೋ ಬಾರಿ ಸೂಕ್ತಿಯನ್ನು ಹೇಳಿದ್ದನು. ಆದರೂ ಆ ಮಾತುಗಳನ್ನು ತಿರಸ್ಕರಿಸಿದ ರಾವಣನು ನೀಚಕೃತ್ಯಾದಿಗಳಿಗೆ ಮುಂದಡಿಯಿರಿಸಿದನು. ಇದನ್ನು ತಿಳಿದ ವಿಭೀಷಣನು "ಹೆಂಡದವನೊಡನೆ ಸರಸವಾಡುವುದಕ್ಕಿಂತ,ಗಂಧದವನೊಡನೆ ಗುದ್ದಾಟವೆ ಲೇಸು' ಎಂಬಂತೆ ವಿವೇಕದಿಂದ ರಾಮನ ಪಾಳೆಯವನ್ನು ಸೇರಿದನು. ರಾವಣನ ಅಂತ್ಯದನಂತರ ಶ್ರೀ ರಾಮನು ವಿಭೀಷಣನಿಗೆ ಲಂಕೆಯ ಸಿಂಹಾಸನಾಧಿಪತ್ಯವನ್ನು ಕರುಣಿಸಿದನು. ಆಗ ಸುಗ್ರೀವನು ಸಂದೇಹಯುಕ್ತನಾಗಿ "ಲಂಕಾರಾಜ್ಯವು ನಮ್ಮ ಪಾಲಿಗೆ ಬಾರದೆ ಹೋದರೆ ವಚನಾತಿಕ್ರಮವು ಬಾರದೇ?" ಎಂದನು. ಆಗ ಶ್ರೀ ರಾಮನು "ಒಂದು ವೇಳೆ ಅಂತಹ ಸನ್ನಿವೇಶ ಒದಗಿದರೆ ನನ್ನ ಅಯೋಧ್ಯೆಯನ್ನು ಈತನಿಗೆ ಧಾರೆಯೆರೆಯುವೆನು" ಎಂದನು. ಆಗಲೇ ಕಪಿಗಳು "ಹುಟ್ಟಿದರೆ ಹುಟ್ಟಬೇಕು ವಿಭೀಷಣನಂತಹ ಭಾಗ್ಯಶಾಲಿ!" ಎಂದು ಜಯಘೋಷಮಾಡಿದರು.

ಕೃಪಾಚಾರ್ಯ

ಭಾರತ ಯುದ್ಧದಲ್ಲಿ ಕೃಪಾಚಾರ್ಯರ ಕಥೆ ಬಹು ಚಿಕ್ಕದು. ಆದರೆ ಅವರು ಬಹುಜ್ಞಾನಿಗಳು; ಪ್ರತಿಭಾಶಾಲಿಗಳು. ದುರ್ಯೋಧನನಿಗೆ ರಾಜ್ಯಭಾರಕ್ರಮದಲ್ಲಿ ಅನೇಕ ಸಾರಿ ಬುದ್ಧಿ, ನೀತಿವಾಕ್ಯಗಳನ್ನು ಹೇಳಿರುವರು. ಭೀಷ್ಮಾಚಾರ್ಯರ ಬಳಿಕ ಹಿರಿಯರೆಂದರೆ ಇವರೇ ಆಗಿದ್ದರು. ಆದರೆ, ದುರ್ಯೋಧನನು ಕರ್ಣಾದಿಗಳ ಮಾತಿನಿಂದಲೇ ಉಬ್ಬಿ ಸೇನೆಮುಂದಿನಾರ್ಬಲಗಳನ್ನೆಲ್ಲಾ ಕಳೆದುಕೊಂಡನು; ತಾನೂ ಮೃತನಾದನು. ಸುಯೋಧನನ ಅಂತ್ಯಕಾಲದಲ್ಲಿ ಅಶ್ವತ್ಥಾಮನೊಡನೆ ದ್ರೌಪದೇಯರ ಶಿರಸ್ಸನ್ನು ಕಡಿಯುವುದಕ್ಕಾಗಿ ಸ್ವಾಮಿಕಾರ್ಯವೆಂದು ಸಹಾಯಕರಾಗಿದ್ದರು. ಅಂತೂ ಭಾರತಾವಹವು ಮುಗಿಯುತ್ತಿರಲು ಅರ್ಜುನಸಾರಥಿಯ ಅನುಗ್ರಹದಂತೆ ಬದರಿಕಾಶ್ರಮದಲ್ಲಿ ತಪಸ್ಸಿನಿಂದ ಕಾಲವ್ಯಯಮಾಡಿದರೆಂದು ಮಹಾಭಾರತ ಹೇಳುತ್ತಿದೆ.

ಪರಶುರಾಮ

ಭೂಮಿಯಲ್ಲಿ ರಾಕ್ಷಸರೆಲ್ಲಾ ಕ್ಷತ್ರಿಯರಾಗಿ ಜನಿಸಿದರು. ಅಸುರ ಕರ್ಮವನ್ನೆಸಗುತ್ತಾ ಸಜ್ಜನರನ್ನು ಪೀಡಿಸಲಾರಂಭಿಸಿದರು. ಸಜ್ಜನರ

ಮೊರೆಯುಸ್ಸಾಲಿಸಿ ಶ್ರೀ ಹರಿಯು ಭೃಗುಕುಲೋತ್ತಮನು ಜಮದಗ್ನಿಯ ಪತ್ನಿ ರೇಣುಕೆಯ ಗರ್ಭದಲ್ಲಿ ಅವತರಿಸಿದನು. ಪರಶುವೇ (ಕೊಡಲಿ) ಆಯುಧ ವಾಗಿದ್ದ ಕಾರಣ 'ಪರಶುರಾಮ'ನೆಂದು ಕರೆದರು. ಕಾರ್ತವೀರ್ಯರೇ ಮೊದ ಲಾದ ಅನೇಕ ಕುಕರ್ಮಿಗಳನ್ನು ವಧಿಸಿದನು. ಆಗ ಮಿಥಿಲಾಪಟ್ಟಣದಲ್ಲಿ ಸೀತಾ ಸ್ವಯಂವರದ ವೇಳೆ ಹರಧನುರ್ಭಂಗದ ಶಬ್ದವನ್ನು ಕೇಳಿ ರೋಷ ಪೂರಿತನಾಗಿ "ಇವನಾರೋ ಕ್ಷತ್ರಿಯನಿರಬೇಕೆಂ"ದು ಬರುತ್ತಿರಲು, ಮಧ್ಯ ಮಾರ್ಗದಲ್ಲಿ ಶ್ರೀ ರಾಮನ ದರ್ಶನವಾಯಿತು. ಲೋಕ ವ್ಯಾಮೋಹಕ್ಕಾಗಿ ಹೊಯ್ದಾಡಿಕೊಂಡು, ಶ್ರೀ ರಾಮಚಂದ್ರನು ಜಮದಗ್ನಿಯ ಆಯುಧ ವನ್ನು ಸ್ವಾಧೀನಪಡಿಸಿಕೊಂಡನು. "ಸೀತಾಪತೇ, ನಾನು ಮಹೇಂದ್ರ ಪರ್ವತವನ್ನು ಕುರಿತು ಹೋಗುವೆನು. ಲೋಕವು ಅಪ್ರತಿಮವಾದುದು. ನೀನು ಮೆರೆದಾಡು" ಎಂದು ಅಲ್ಲಿಂದ ಹೊರಟು, ಮಹೇಂದ್ರ ಪರ್ವತಕ್ಕಾಗಿ ತೆರಳಿದನು.

ಆಜನ್ಮ ಬ್ರಹ್ಮಚಾರಿಯಾಗಿ ಐಹಿಕ ಸುಖವನ್ನು ತ್ಯಾಗಮಾಡಿ ಬಾಳಿ ದನು ಅಶ್ವತ್ಥಾಮ. ಬಲಿ, ವಿಭೀಷಣರು ರಾಜಸಿಂಹಾಸನವನ್ನೇರಿದರೂ ಪ್ರಗತಿಸಾಧನೆಯನ್ನು ಹೊಂದಿದರು. ಋಷಿಯಾಗಿ ವ್ಯಾಸರೂ, ಪರಶು ರಾಮನೂ ತಮ್ಮ ಧರ್ಮದಂತೆ ಬಾಳಿದರು. ಹನುಮಂತನಾದರೋ ಸ್ವಾಮಿ ಭಕ್ತನಾಗಿ ಜೀವನಸಾಗಿಸಿದನು.

ಇವರು ಸ್ವಧರ್ಮನಿರತರಾಗಿ ಒಂದೇ ದೃಷ್ಟಿಯಿಂದ ಬಾಳಿದವರಾದು ದರಿಂದಲೇ ನಿತ್ಯಸ್ಮರಣೀಯರಾದರು.

"ಅನಾಯಾಸೇನ ಮರಣಂ । ವಿನಾ ದೈನ್ಯೇನ ಜೀವನಮ್ ॥
ಸುರಾರಾಧಿತ ಪಾದಾಬ್ಜ । ದೇಹಿಮೇ ಮಧುಸೂದನ ॥

ಎಂಬ ಈ ಶ್ಲೋಕದ ಸೂಕ್ಷ್ಮಗೂಢಾರ್ಥದೃಷ್ಟಿಯಲ್ಲಿಯೂ, ಧರ್ಮಶಾಸ್ತ್ರದ ದೃಷ್ಟಿಯಲ್ಲಿಯೂ ಬಾಳಿ ಜೀವನಸಾಗಿಸಿ ಚಿರಂಜೀವಿಗಳಾದವರಲ್ಲಿ ಈ ಏಳು ವ್ಯಕ್ತಿಗಳು ಸ್ತುತ್ಯಾರ್ಹರು.

ಶಾಂತಿಃ! ಶಾಂತಿಃ!! ಶಾಂತಿಃ!!!

Edited, Printed & Published by K. V. Shenoy
at The Prabhat Printers, Ltd., Mangalore.